ಶ್ರೀ ಎಚ್. ಎಂ. ಚನ್ನಬಸಪ್ಪ.—ಬಿ. ಡಿ. ವರ್ಕ್ಸ್‌ನವರು ಮಾತು ಕೊಡಬೇಕಾಗುತ್ತದೆ. ಅವರಲ್ಲಿ ೬½ ಮೈಲಿ ಆಸ್ಫಾಲ್ಟ್ ಮಾತಿದ್ದೇವೆ. ೧೨ ಮೈಲಿ ಗ್ರಾವೆಲ್ ರೋಡ್ ಸ್ಟೇಜ್ ಬೈ ಸ್ಟೇಜ್ ಡೆವಲಪ್ ಆಗಬೇಕಾಗಿರುತ್ತದೆ. ಅಮೇಲೆ ಆಸ್ಫಾಲ್ಟ್ ರೋಡ್ ಆಗಬೇಕಾದರೆ ಸಮ್ಮಕ್ಕೆ ಪಿ.ಡಿ. ವರ್ಕ್ಸ್ ಸಣ್ಣ ಪುಟ್ಟವು ಏನು ಇವೆ ಅವುಗಳನ್ನು ಮಾತಿಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

ಬಳ್ಳಾರಿ ಜಿಲ್ಲೆಯಲ್ಲಿ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸುವುದು

೨೩೮. ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಬಳ್ಳಾರಿ ಜಿಲ್ಲೆಯಲ್ಲಿ ೨೦ ಅಂಶಗಳ ಕಾರ್ಯಕ್ರಮ ಪ್ರಗತಿಯು ಯಾವ ಹಂತದಲ್ಲಿದೆ.

(ಆ) ಈವರೆಗೆ ಸರ್ಕಾರ ಎಷ್ಟು ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಿದೆ.

(ಇ) ಎಲ್ಲಾ ಕಾರ್ಯಕ್ರಮಗಳನ್ನು ಪೂರ್ತಿಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ.

(ಈ) ಪ್ರಗತಿಯಲ್ಲಿರುವ ಪ್ರತಿಯೊಂದು ಕಾರ್ಯಕ್ರಮದ ಬಗ್ಗೆ ವಿವರಗಳೇನು.

(ಉ) ಸದರಿ ಕಾರ್ಯಕ್ರಮಗಳ ಯಶಸ್ವಿಗೆ ಜಿಲ್ಲಾ ಕಮಿಟಿಯನ್ನು ಎಷ್ಟು ಸಲ ಕರೆಯಲಾಗಿದ್ದಿತು

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳ ಪರವಾಗಿ).—

(ಅ) ಮತ್ತು (ಆ)೨೦ ಅಂಶಗಳಲ್ಲಿ ಜಿಲ್ಲಾ ಮಟ್ಟದಲ್ಲಿನ ಕಾರ್ಯಕ್ರಮಗಳ ಪ್ರಗತಿಯ ಬಗ್ಗೆ ವಿವರಣಾ ಪತ್ರವನ್ನು ಸಭೆಯ ಮುಂದಿಡಲಾಗಿದೆ.

(ಇ) ಎಲ್ಲಾ ಕಾರ್ಯಕ್ರಮಗಳು ವಿವಿಧ ಹಂತದಲ್ಲಿರುವುದರಿಂದ ಪೂರ್ತಿಗೊಳಿಸಲು ಬೇಕಾಗುವ ಸಮಯ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ.

(ಈ) ಸಭೆಯ ಮುಂದಿಟ್ಟಿರುವ ಉಪ-ಪ್ರಶ್ನೆ (ಅ) ಮತ್ತು (ಆ) ಗೆ ಲಗತ್ತಿಸಿರುವ ವಿವರಣಾ ಪತ್ರದಲ್ಲಿ ವಿವರಿಸಲಾಗಿದೆ.

(ಉ) ಈವರೆಗೆ ಜಿಲ್ಲಾ ಸಮಿತಿಯನ್ನು ಮೂರು ಬಾರಿ ಕರೆಯಲಾಗಿದೆ.

ಶ್ರೀ ಬಿ. ಇ. ರಾಮಯ್ಯ.—ನನ್ನ (ಉ) ಪ್ರಶ್ನೆಗೆ ತಾವು ಉತ್ತರದಲ್ಲಿ ಮೂರುಸಾರಿ ಕರೆದಿದ್ದೇವೆ ಎಂದು ಹೇಳಿದ್ದೀರಿ. ಇವರಲ್ಲಿ ಆಫಿಷಿಯಲ್ಸ್ ಮತ್ತು ನಾನ್ ಆಫಿಷಿಯಲ್ಸ್ ಯಾರಾದರೂ ಇದ್ದಾರೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನ್ ಆಫಿಷಿಯಲ್ಸ್ ಯಾರು ಯಾರು ಇದ್ದಾರೆಂಬುದನ್ನು ತಕ್ಷಣದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಇವತ್ತಿನವರೆಗೂ ಎಂ.ಎಲ್.ಎ. ಮೆಂಬರ್ಸ್ ಆಫ್ ದಿ ಡಿಸ್ಟ್ರಿಕ್ಟ್ ಕಮಿಟಿಯನ್ನು ಇವತ್ತಿನವರೆಗೂ ಕರೆದಿಲ್ಲ. ಅದಕ್ಕೆ ಕಾರಣ ಏನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರುವ ವರದಿ ಪ್ರಕಾರ ಮೂರು ಮೀಟಿಂಗ್ ನಡೆದಿದೆ.

ಶ್ರೀ ಬಿ. ಇ. ರಾಮಯ್ಯ.—ಅಲ್ಲಿ ಮೀಟಿಂಗ್ ನಡೆದಿದೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಅದರಲ್ಲಿ ಎಂ.ಎಲ್.ಎ. ಇದ್ದಾರೆಯೋ ಇಲ್ಲವೋ ಎಂಬುದನ್ನು ತಿಳಿಸಿ.

SRI H. M. CHANNABASAPPA.—I will examine that.

ಶ್ರೀ ಬಿ. ಇ. ರಾಮಯ್ಯ.—ಈ 20 ಅಂಶದ ಕಾರ್ಯಕ್ರಮದಲ್ಲಿ ಇದಕ್ಕೆ ಇನ್‌ಚಾರ್ಜ್ ವಹಿಸಿಕೊಂಡಿರುವ ಮಿನಿಸ್ಟರ್ ಯಾರು ? ಬಳ್ಳಾರಿ ಜಿಲ್ಲೆಯಲ್ಲಿ 8 ತಾಲ್ಲೂಕುಗಳಲ್ಲಿ ತಾಲ್ಲೂಕು ಲೆವಲ್ ಕಮಿಟಿ ಮೀಟಿಂಗ್ ಹಾಕಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಳ್ಳಾರಿ ಜಿಲ್ಲೆಯ ಮಿನಿಸ್ಟರನ್ನು ಕೇಳಿದರೆ ಹೇಳಿಬಿಡುವರು ಅದನ್ನು ನನ್ನ ಬಾಯಲ್ಲಿ ಹೊರಡಿಸಬೇಕೇನು ?

ಶ್ರೀ ಬಿ. ಇ. ರಾಮಯ್ಯ.—ಈ 21 ಅಂಶದ ಕಾರ್ಯಕ್ರಮದಲ್ಲಿ ಈ ಹೌಸಸ್ ಬಗ್ಗೆ ಮಿನಿದೆ 30,241 ಹೌಸಸ್ ಕೊಟ್ಟಿದ್ದಾರೆ. ಅದು ಬಹಳ ಸ್ಲೋ ಆಗಿ ನಡೆಯುತ್ತಿದೆ. ಅದು ತೀವ್ರವಾಗಿ ನಡೆಯುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆಲ್ಲವೂ ಕೂಡ ಕಾಲವನ್ನು ತೆಗೆದುಕೊಳ್ಳುತ್ತಕ್ಕಂಥ ಕೆಲಸಗಳು ಆದ್ದರಿಂದ ರೂಲ್ಸ್ ಪ್ರಕಾರ ಯಾವ ಯಾವ ಕೆಲಸಗಳನ್ನು ಯಾವರೀತಿ ಮಾಡಬೇಕು ಎಂಬುದರ ಬಗ್ಗೆ ವಿಧಿನಿಯಮಗಳನ್ನು ಅನುಸರಿಸಿ ಮಾಡಬೇಕು. ವಿಧಿನಿಯಮಗಳನ್ನು ಅನುಸರಿಸಿ ಮಾಡಬೇಕಾದರೆ ಕೊಂಚ ಕಾಲವಿಳಂಬವಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಇಲ್ಲಿ ಹೈಬ್ರಿಡ್ ಜವಾರ್ ರೇಟ್ ಕೊಟ್ಟಿದ್ದೀರಿ. 95 ಪೈಸೆ, ಒಂದು ರೂಪಾಯಿ ಎಂದು ಮಾರ್ಕೆಟ್ ರೇಟನ್ನು ಕೊಟ್ಟಿದ್ದೀರಿ ಇದು ಆದಕ್ಕಿಂತ ಬಹಳ ಕಡಿಮೆ ಇದೆಯೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ತಿಳಿದುಬಂದಿರತಕ್ಕ ವರದಿ ಪ್ರಕಾರ ಇದು ಇದೆ. ಇನ್ನೂ ಏನಾದರೂ ಆದರ ಬಗ್ಗೆ ವರದಿ ಇದ್ದರೆ ಕೊಟ್ಟರೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಭೈರಪ್ಪಾಜಿ.—ಈ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಎಲ್ಲೂ ಕಡೆಯೂ ಸಮಿತಿಗಳನ್ನು ರಚನೆ ಮಾಡಿದ್ದೀರಿ. ಹಾಗೆ ಮಾಡಿದ್ದರೆ ಈ ಸಮಿತಿಗಳು ಎಲ್ಲಾ ಕಡೆಯೂ ಸಮರ್ಪಕವಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಕೆಲಸ ಮಾಡುತ್ತಿವೆಯೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟದ್ದು.

ಶ್ರೀ ಬಿ. ಇ. ರಾಮಯ್ಯ.—ಹೈಬ್ರಿಡ್ ಜವಾರ್ 65 ಪೈಸೆ ಇರುವುದು ಈಗ 95 ಪೈಸೆ ಒಂದು ರೂಪಾಯಿ ಇದೆ ರೈಸ್ ನೂಪಾಸ್‌ಫೈನ್ 2-90 ಮೊದಲು ಇತ್ತು ಈಗ 4-20 ಇದೆ ಎಂದು ಹೇಳಿ ರೇಟ್ ಕೊಟ್ಟಿದ್ದೀರಿ ಇದಕ್ಕಿಂತ ಬಹಳ ಕಡಿಮೆ ಇದೆ ಆದರಿಂದ ರೈತರಿಗೆ ಬಹಳ ಬೆಲೆಗಳು ಇಳಿದಿರುವುದರಿಂದ ಹೈಬ್ರಿಡ್ ಜವಾರನ್ನು ತೆಗೆದುಕೊಳ್ಳುವರೇ ಇಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರೇಟ್ ಪ್ರಶ್ನೆಗೆ ನಾವು ಉತ್ತರವನ್ನು ಸರಬರಾಜು ಮಾಡುವಾಗ ಅವತ್ತು ಇದ್ದಂತಹ ರೇಟ್ಸ್ ಇವತ್ತು ಅದು ಬದಲಾವಣೆ ಆಗಿರಬಹುದು.

Number of S C./S T. Officials in Bangalore Dairy

474. Sri Mallikarjuna Kharge (Gurmitkal).—Will the Minister for Agriculture and Animal Husbandry be pleased to state :—

(*a*) the total number of Scheduled Castes and Scheduled Tribes Officials working in Bangalore Dairy Distribution Section in various Cadres ;

(*b*) whether these communities have been given due representation in the various cadres of posts in the said Dairy ;

(*c*) whether the Dairy advertised for filling up the posts and if so give particulars ;

(*d*) whether there are any members of staff of Bangalore Dairy working in the residence of any of the officials ; if so, the number, their names and salaries etc. ?